ಗಾಢ ನಿದ್ದೆಯಲ್ಲಿದ್ದ ಅವಳ ಕಿವಿಗಳಿಗೆ ‘ಬುಸ್…’ ಎನ್ನುವ ಶಬ್ದ ಕಾಯ್ದ ಸೀಸವನ್ನು ಸುರಿದಂತಾಗಿ ಥಟ್ಟನೇ ಕಣ್ಣು ಬಿಟ್ಟಳು. ಕೋಣೆ ಗಾಢಾಂಧಕಾರವನ್ನು ಹೊದ್ದು ಮಲಗಿದೆ. ನಿಗಿ ನಿಗಿ ಕೆಂಡದಂತೆ ಹೊಳೆಯುತ್ತಿರುವ ಆ ಸರ್ಪ ಅವಳಿಂದ ಕೆಲವೇ ಅಡಿಗಳಷ್ಟು ದೂರದಲ್ಲಿದೆ. ಅದರ ಕಣ್ಣುಗಳಲ್ಲಿ ಸಾವಿರ ಮಿಂಚುಗಳ ಸಂಚಾರವಿದೆ. ಸುರುಳಿ ಸುತ್ತಿಕೊಂಡು ಹೆಡೆಯೆತ್ತಿ ಕುಳಿತಿರುವ ಅದು ಯಾವ ಕ್ಷಣದಲ್ಲೂ ಅವಳ ಮೇಲೆ ಎರಗುವಂತಿದೆ. ತನ್ನ ಸರ್ವಾಂಗಗಳಿಗೂ ಸಂಕೋಲೆ ಬಿದ್ದಂತಹ ಅನುಭವ. ಕೈ ಕಾಲುಗಳು ದೇಹಕ್ಕೆ ಗಟ್ಟಿಯಾಗಿ ಅಂಟಿಕೊಂಡಂತಹ ಭಾವ. ಭಯದಿಂದ ಅವಳ ಉಸಿರಾಟದ ವೇಗ ಹೆಚ್ಚುತ್ತಿದೆ. ದೃಷ್ಟಿಯನ್ನು ಕಿತ್ತು ಬೇರೆಡೆ ಕೀಲಿಸ ಬೇಕೆಂದರೆ ಆಗುತ್ತಿಲ್ಲ. ತನ್ನ ದೇಹವನ್ನು ನಿಯಂತ್ರಿಸುವ ಸೂತ್ರವೆಲ್ಲವನ್ನೂ ಈ ಸರ್ಪವೇ ಗುತ್ತಿಗೆಯನ್ನು ಪಡೆದುಕೊಂಡಂತೆ ಭಾಸವಾಗುತ್ತಿದೆ.

‘ಅಮ್ಮಾ’ ಎಂದು ಕೂಗಬೇಕೆಂದರೆ ತನ್ನ ಬಾಯೊಳಗಿನ ಜಿಹ್ವೆಯೂ ಮಾಯವಾಗಿದೆ. ಮಾತನಾಡುವ ಕ್ರಿಯೆಗೆ ನಾಲಿಗೆ ಎನ್ನುವ ಅಂಗ ಅತೀ ಅವಶ್ಯ ಎಂದು ಶಾಲೆಯಲ್ಲಿ ವಿಜ್ಞಾನ ಕಲಿಸುವ ಟೀಚರ್ ಹೇಳಿದ್ದು ನೆನಪಾಯಿತು. ತಾನು ಬದುಕಿದ್ದೇನೆ ಎಂಬುದಕ್ಕೆ ಸಾಕ್ಷಿ ಕೇವಲ ತನ್ನ ಕಣ್ಣಿಗೆ ಆ ಸರ್ಪ ಕಾಣುತ್ತಿದೆ ಎನ್ನುವುದು. ಉಳಿದಂತೆ ತಾನೊಬ್ಬ ಜೀವಂತ ಶವ. ಆ ಸರ್ಪ ಈಗ ತನ್ನತ್ತಲೇ ಚಲಿಸುತ್ತಿದೆ. ತನ್ನ ಮೈಯೆಲ್ಲ ಬೆವರಿ ಹಾಸಿಗೆಯೆಲ್ಲ ತೊಯ್ದು ತೊಪ್ಪೆಯಾಗಿದೆ. ಆ ಸರ್ಪ ಕೊರಡಿನಂತೆ ಬಿದ್ದುಕೊಂಡಿರುವ ತನ್ನ ಎಡಗೈ ಮೇಲೇರುತ್ತಿದ್ದಂತೆಯೇ ಕೊರೆಯುವ ಮಂಜುಗಡ್ಡೆಯೊಂದು ತನ್ನ ಮೇಲೆ ಹರಿದಾಡಿದಂತಹ ಅನುಭವ. ಅದು ನಿಧಾನವಾಗಿ ತೋಳಿನ ಮೇಲೇರಿ ಅಲ್ಲಿಂದ ನಿಧಾನವಾಗಿ ತನ್ನ ಎದೆಯನ್ನೇರಿ ಕುಳಿತು ತನ್ನನ್ನೇ ದಿಟ್ಟಿಸುತ್ತಿದೆ. ಅದರ ಭಾರವೋ ಭೀಮ ಭಾರ. ಎದೆಗೂಡಿನ ಮೂಳೆಗಳೆಲ್ಲ ಒಂದೊಂದಾಗಿ ಲಟ ಲಟನೇ ಮುರಿಯುವ ಸದ್ದು ಕತ್ತಲೆಯ ನೀರವತೆಯಲ್ಲಿ ಸ್ಪಷ್ಟವಾಗಿ ಕೇಳಿಸುತ್ತಿದೆ. ಅವಳ ಮೂಗಿಗೆ ಹತ್ತಿರವಾಗಿ ಕುಳಿತ ಅದರ ಮೈಯಿಂದ ಹೊರ ಸೂಸುತ್ತಿರುವ ಬೆವರಿನ ಘಾಟು ವಾಸನೆಯಿಂದ ಹೊಟ್ಟೆ ತೊಳಸಿ ದಂತಾಗುತ್ತಿದೆ. ಈಗ ಅದರ ಮೃದುವಾದ ತಣ್ಣನೆಯ ಚರ್ಮದ ಮೇಲೆ ಚಿಕ್ಕ ಚಿಕ್ಕರೋಮಗಳು ಹುಟ್ಟಿಕೊಳ್ಳುತ್ತಿವೆ. ಆ ಸರ್ಪ ಸಹಸ್ರಪದಿಯಾಗಿ ಬದಲಾಗಿ ಇನ್ನೂ ಅಸಹ್ಯ ಹುಟ್ಟಿಸುತ್ತಿದೆ. ಗೋಡೆಯ ಮೇಲೆ ತೂಗು ಹಾಕಿದ್ದ ದೇವರ ಪಟದತ್ತ ಅವಳು ದೃಷ್ಟಿಯನ್ನು ನೆಟ್ಟು ಅಸಹಾಯಕಳಾಗಿ ಮೊರೆ ಇಡುತ್ತಿದ್ದಾಳೆ. ಆಗ ತಟ್ಟನೆ ಜರಿ ರೂಪದ ಆ ಸರ್ಪ ಜೋರಾಗಿ ಬುಸುಗುಟ್ಟಿ ಅವಳ ಎದೆಯ ಭಾಗದಿಂದ ಹೊಟ್ಟೆಯತ್ತ ಸಾಗಿ ತೊಡೆಯನ್ನು ಬಳಸಿ ನಿಧಾನವಾಗಿ ಕೆಳಗಿಳಿದು ಮಾಯವಾಗುತ್ತದೆ.

ಆಕೆ ಶಾಲೆಗೆ ಹೋಗುವ ದಾರಿಯುದ್ದಕ್ಕೂ ಹಸಿರು ಹೊದ್ದ ಗದ್ದೆಗಳು. ಅಡಿಕೆ, ತೆಂಗುಗಳಿಂದ ಭಾರವಾಗಿ ಬಾಗಿ ಬಳುಕುವ ಮರಗಳು. ಅವಳಂತೆಯೇ ಹರೆಯವನ್ನು ಮೈದುಂಬಿಕೊಳ್ಳುತ್ತಿರುವ ಬಾಳೆಯ ಗಿಡಗಳು. ಪೀಚುಗಾಯಿಗಳಾಗಿದ್ದ ಪೇರಲ, ನೆಲ್ಲಿ, ಕವಳೆ, ಮಾವುಗಳೆಲ್ಲ ದೃಷ್ಟಿ ತಾಕಿ ನೋಡುಗರ ಬಾಯಲ್ಲಿ ಹನಿಯೂರಿಸುತ್ತಿವೆ. ಅದಾವಾಗ ಕಿತ್ತು ರುಚಿ ನೋಡುವೆವೋ ಎಂಬಂತೆ ಕಣ್ಣು ಕುಕ್ಕುತ್ತಿವೆ. ಅವಳು ಆಗ ತಾನೆ ಭುವಿಗಿಳಿದ ಎಳೆಗರುವಿನಂತೆ. ಕಾಲೂರಿ ನಿಲ್ಲಲು ಅರಿಯುತ್ತಲೇ ಪುಟಪುಟನೆ ನೆಗೆಯುವ ಕರುವಿನಂತೆ. ನಿತ್ಯ ದಾರಿಯುದ್ದಕ್ಕೂ ಸಿಗುವ ಹೂ, ಕಾಯಿ, ಹಣ್ಣುಗಳೆಲ್ಲ ಆಕೆಯ ಪುಸ್ತಕದ ಚೀಲವನ್ನು ಸೇರುತ್ತಿದ್ದವು. ತುತ್ತ ತುದಿಯಲ್ಲಿ ಕುಳಿತು ನನ್ನನ್ನು ಕೀಳುವ ಛಾತಿ ಯಾರಿಗಿದೆ ಎಂದು ಅಣಕಿಸುವ ಕಾಯಿಹಣ್ಣುಗಳಿಗೇ ಸವಾಲೆಸೆಯುವವಳು ಅವಳು. ಪುಸ್ತಕದ ಚೀಲವನ್ನು ಗೆಳತಿಯರ ಕೈಗಿತ್ತವಳೇ ಮಂಗನಂತೆ ಸರಸರನೇ ಮರವನ್ನೇರಿ ಕಿತ್ತ ಹಣ್ಣನ್ನು ಹಲ್ಲುಗಳ ಮಧ್ಯ ಕಚ್ಚಿ ಹಿಡಿದು ಮರವನ್ನು ಇಳಿಯುವ ಇವಳೆಂದರೆ ಗೆಳತಿಯರಿಗೆಲ್ಲ ಬೆರಗು. ಶಾಲೆ ಎಂದರೆ ಇವಳಿಗೆ ಅದಮ್ಯ ಉತ್ಸಾಹ.

ಹಸಿರು ಗದ್ದೆಗಳ ಮಧ್ಯದಲ್ಲಿರುವ ತನ್ನ ಮನೆಯಿಂದ ಕಾಲು ಗಂಟೆಗಳ ನಡಿಗೆಯ ನಂತರ ಸಂಕವನ್ನು ದಾಟಿದೊಡನೆ ಗೆಳತಿ ಗಿರಿಜಾ ಜೊತೆ ಯಾಗುತ್ತಾಳೆ. ಅಲ್ಲಿಂದ ಮುಕ್ಕಾಲು ಗಂಟೆಗಳ ಹಾದಿ ಸುಗಮವೆನ್ನಿಸುತ್ತದೆ. ಗಿರಿಜಾ ಹೇಳುವ ಸಿನಿಮಾ ಕಥೆಗಳಂತೂ ಕಣ್ಣಿಗೆ ಕಟ್ಟುವಂತಿರುತ್ತವೆ. ಎರಡು ಮೂರು ಗಂಟೆಗಳ ಸಿನಿಮಾ ಕಥೆಯನ್ನು ಅವಳು ಒಂದು ವಾರ ಎಳೆಯುತ್ತಾಳೆ. ನಾಯಕ, ನಾಯಕಿ, ವಿಲನ್, ಕಾಮಿಡಿ ಪಾತ್ರಗಳೆಲ್ಲವನ್ನೂ ಆಕೆ ಅನುಭವಿಸಿ, ಅಭಿನಯಿಸಿ ಹೇಳುತ್ತಿದ್ದರೆ, ತಾನು ಸಿನಿಮಾ ಹಾಲ್‌ನಲ್ಲಿ ಇರುವಂತೆ ಭಾಸವಾಗುತ್ತದೆ. ಸಿಟಿಯಲ್ಲಿರುವ ಅವಳ ಮಾವನ ಥಿಯೇಟರ್‌ಗೆ ಬೇಕಾದಾಗ ಹೋಗಿ ಬಿಟ್ಟಿಯಾಗಿ ಗಿರಿಜಾ ಸಿನಿಮಾ ನೋಡುತ್ತಾಳೆ. ಆಕೆ ಅದೆಷ್ಟು ಅದೃಷ್ಟವಂತಳು ಎನ್ನಿಸುತ್ತದೆ. ಚಿತ್ರ ಮಂದಿರಕ್ಕೆ ಬಂದ ಒಂದೂ ಸಿನಿಮಾವನ್ನು ಕೂಡ ಆಕೆ ತಪ್ಪಿಸಿಕೊಳ್ಳುವುದಿಲ್ಲವಂತೆ. ಆದರೆ ತನ್ನ ಮನೆಯಲ್ಲಿ? ಟಿ.ವಿ.ಯಲ್ಲಿನ ಸಿನಿಮಾಗಳನ್ನು ನೋಡಲೂ ಅಪ್ಪನ ಲಗಾಮು. ‘ಸಿನಿಮಾ ನೋಡಿ ಹೆಣ್ಣು ಮಕ್ಕಳು ಹಾಳಾಗುತ್ತಾರೆ’ ಎಂಬುದು ಅಪ್ಪನ ಅನಿಸಿಕೆ. ಆದರೆ ಅಪ್ಪನ ಅಭಿಪ್ರಾಯವನ್ನು ತಾನು ಖಂಡಿತ ಒಪ್ಪುವುದಿಲ್ಲ. ವಾರಕ್ಕೊಂದು ಸಿನಿಮಾ ನೋಡುವ ಗಿರಿಜಾ ಅದೆಲ್ಲಿ ಹಾಳಾಗಿದ್ದಾಳೆ?. ಒಳ್ಳೆಯ ಹುಡುಗಿಯೇ ಅವಳು. ಗಿರಿಜಾ ತನ್ನ ಜೊತೆಗಿರುವವರೆಗೂ ಸಿನಿಮಾ ಕಥೆಗಳನ್ನು ಹೇಳುತ್ತಾಳೆ. ಅದು ಅಪ್ಪನಿಗಂತೂ ತಿಳಿಯುವುದಿಲ್ಲ.

ಅದೇಕೋ ಇಂದು ಎದೆ ಗುಂಡಿಗೆ ನಗಾರಿ ಬಡಿದಂತೆ ಹೊಡೆದುಕೊಳ್ಳುತ್ತಿದೆ. ಯಾರೋ ತನ್ನನ್ನು ಹಿಂಬಾಲಿಸುತ್ತಿರುವಂತಹ ಭಾವನೆ. ತರಗತಿಯಲ್ಲಿ ಆಗಾಗ ತನ್ನತ್ತ ಕಳ್ಳನೋಟ ಬೀರುವ ಅಚ್ಯುತನೆ? ಹಿಂತಿರುಗಿ ನೋಡಲೂ ಭಯ. ಅವನು ತನ್ನನ್ನು ಹಿಂಬಾಲಿಸಿಕೊಂಡು ಬರುವುದು, ಅವನನ್ನು ನಾನು ಹಿಂತಿರುಗಿ ನೋಡುವುದು. ನಂತರ ಯಾರಾದರೂ ಸ್ನೇಹಿತೆಯರು ಕಂಡರೆ ಶಾಲೆಯಲ್ಲೆಲ್ಲ ಗುಲ್ಲು. ಬಿರುಸಾದ ಅವಳ ನಡಿಗೆ ಓಟದ ರೂಪವನ್ನು ಪಡೆದಿತ್ತು. ಸಂಕವನ್ನು ದಾಟಿ ಮುಖ್ಯ ರಸ್ತೆಗೆ ಬಂದಾಗ  ಜನರು ಕಾಣತೊಡಗಿದರು. ಆಗ ನಿರುಮ್ಮಳಾಗಿ ಹೆಜ್ಜೆ ಹಾಕತೊಡಗಿದಳು. ದೂರದಲ್ಲಿ ಗಿರಿಜಾ ತನಗಾಗಿ ಕಾಯುತ್ತಿರುವುದು ಕಂಡಾಗ ಎದೆ ಬಡಿತ ಸ್ಥಿಮಿತಕ್ಕೆ ಬಂದಿತ್ತು.

ಸಂಜೆ ಗಿರಿಜಾಳನ್ನು ಬೀಳ್ಕೊಟ್ಟು ಮನೆಯತ್ತ ಹೆಜ್ಜೆ ಹಾಕುತ್ತಿದ್ದಂತೆ ಮಳೆ ಹನಿಯತೊಡಗಿತು. ಮನೆ ಸೇರುವುದರಲ್ಲಿ ತೊಯ್ದು ತೊಪ್ಪೆಯಾಗಿರುತ್ತೇನೆ. ತನ್ನ ಹತ್ತಿರ ಒಂದು ಸೈಕಲ್ ಇದ್ದಿದ್ದರೆ? ತಾನು ಎಂಟನೇ ಕ್ಲಾಸಿನಲ್ಲಿ ಓದುವಾಗ ಶಾಲೆಯಲ್ಲಿ ಎಲ್ಲ ಹುಡುಗಿಯರಿಗೂ ಸೈಕಲ್ ನೀಡಿದ್ದರು. ಅದೆಷ್ಟು ಖುಷಿಯಿಂದ ಅಂದು ಮನೆಯವರೆಗೂ ಸೈಕಲ್ ತಳ್ಳಿಕೊಂಡು ಬಂದಿದ್ದೆ? ಅಣ್ಣನ ಹತ್ತಿರ ಸೈಕಲ್ ತುಳಿಯುವುದನ್ನು ಹೇಳಿಸಿಕೊಳ್ಳಬೇಕು. ಗಾಳಿಯಲ್ಲಿ ತೇಲಿದಂತೆ ಸೈಕಲ್ ತುಳಿಯುತ್ತ ಶಾಲೆಗೆ ಹೋಗಿ ಬರಬಹುದು. ಅಷ್ಟು ದೂರದ ಹಾದಿಯನ್ನು ಎಷ್ಟು ಬೇಗ ಸವೆಸಬಹುದು. ಛೆ! ಗಿರಿಜಾಳ ಸಿನಿಮಾ ಕಥೆ ಮಿಸ್ ಆಗುತ್ತದೆ. ಹಣ್ಣು ಕಾಯಿಗಳನ್ನೂ ಕೀಳಲಾಗುವುದಿಲ್ಲ. ಪರವಾಗಿಲ್ಲ. ಸೈಕಲ್ ಬದಿಯಲ್ಲಿ ನಿಲ್ಲಿಸಿ ಕೀಳಬಹುದು, ಗಿರಿಜಾಳೂ ತನ್ನ ಪಕ್ಕದಲ್ಲೇ ಸೈಕಲ್ ತುಳಿದುಕೊಂಡ ಬರುತ್ತಾಳೆ ಎಂದೆಲ್ಲ ಕನಸು ಕಂಡಿದ್ದಳು. ಅದೇ ವರುಷ ಕಾಲೇಜಿಗೆ ಸೇರಿಕೊಂಡಿದ್ದ ಅಣ್ಣ ತನಗೊಂದು ಸೈಕಲ್ ಕೊಡಿಸೆಂದು ಅಪ್ಪನ ಬೆನ್ನು ಬಿದ್ದಿದ್ದ. ಸಿಟಿಯಲ್ಲಿನ ಕಾಲೇಜಿಗೆ ಬಸ್‌ಗಾಗಿ ಕಾಯ್ದು ತಡವಾಗಿ ಹೋಗುವುದರಲ್ಲಿ ಮೊದಲ ಕ್ಲಾಸ್ ಮಿಸ್ ಆಗಿ ಹೋಗುತ್ತದೆ. ಅಣ್ಣನ ಅಳಲಿಗೆ ತಕ್ಷಣ ಅಪ್ಪ ಓಗೊಟ್ಟುಬಿಟ್ಟರು. ತನ್ನ ಪ್ರೀತಿಯ ಹೊಸ ಸೈಕಲ್ ಅಂದೇ ಅಣ್ಣನ ಪಾಲಾಗಿತ್ತು. ಅದನ್ನು ತುಳಿಯುವುದು ಹೋಗಲಿ, ಮುಟ್ಟುವ ಅಧಿಕಾರವೂ ತನಗಿಲ್ಲದಾಯಿತು.

ಸೈಕಲ್ಲಿನ ಗುಂಗಿನಲ್ಲಿ ಮೈಮರೆತ ಅವಳನ್ನು ಹಾದಿಯೇ ಮನೆಯತ್ತ ಕರೆದೊಯ್ಯತೊಡಗಿತ್ತು. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಅವಳ ಬಾಯಿಂದ ಅಮ್ಮಾ ಎಂಬ ಚೀತ್ಕಾರ ಹೊರಟಿತ್ತು. ಸೈಕಲ್ ತುಳಿಯುತ್ತ ಶರವೇಗದಲ್ಲಿ ಬಂದ ಒಬ್ಬ ವ್ಯಕ್ತಿ ಅವಳ ಎದೆಯ ಮೆತ್ತನೆಯ ಭಾಗವನ್ನು ಜೋರಾಗಿ ಹಿಂಡಿ ವೇಗವಾಗಿ ಆಕೆಯನ್ನು ದಾಟಿ ಹೋಗಿ ಬಿಟ್ಟ. ನೋವು, ಅವಮಾನ, ಅಸಹಾಯಕತೆಯಿಂದ ಅವಳ ಕೆನ್ನೆಗಳಿಂದ ಬಳ ಬಳನೆ ಕಣ್ಣೀರು ಹನಿಯತೊಡಗಿತು. ಕಾಲುಗಳು ಒಂದೇ ಸಮನೆ ಕಂಪಿಸುತ್ತಿವೆ. ತನಗಾದ ಈ ಅಸಹ್ಯವನ್ನು ಯಾರಾದರೂ ಗಮನಿಸಿದರೇನೋ ಎಂಬ ಭಯದಿಂದ ಸುತ್ತಲೂ ಒಂದು ಬಾರಿ ದೃಷ್ಟಿಯನ್ನು ಹಾಯಿಸಿದಳು. ಥೂ! ಇಷ್ಟು ವರ್ಷಗಳಲ್ಲಿ ಒಂದು ಬಾರಿಯೂ ಇಂತಹ ಕೆಟ್ಟ ಅನುಭವವಾಗಿರಲಿಲ್ಲ. ಆ ರಾಕ್ಷಸ ಆಕಾಶದಿಂದ ಉದುರಿದವನಂತೆ ಬಂದು ಕ್ಷಣಾರ್ಧದಲ್ಲಿ ಮಾಯವಾಗಿ ಬಿಟ್ಟನಲ್ಲ? ಅವನು ತುಳಿಯುತ್ತಿದ್ದ ಸೈಕಲ್ಲಿನ ಶಬ್ದವೂ ಸದ್ದಡಗಿಸಿಕೊಂಡಿತ್ತಾ? ತಿಳಿಯಾದ ನೀರಿನ ಕೊಳವೊಂದಕ್ಕೆ ಕಲ್ಲೆಸೆದಂತೆ ಅವಳ ಮನಸ್ಸು ಕದಡಿ ಹೋಗಿತ್ತು. ಅವನನ್ನು ಹಿಡಿದು ಕಕ್ಕಸಿನ ಗುಂಡಿಯಲ್ಲಿ ಮುಳುಗಿಸಿ ಮುಳುಗಿಸಿ ಏಳಿಸಬೇಕು. ಕಂಬಕ್ಕೆ